## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 493(564) |
| ಸದಸ್ಯರ ಹೆಸರು | : | ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು; ಈ ಪದವಿ ಕಾಲೇಜುಗಳಿಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿಷಯವಾರು ಮಾಹಿತಿ ಒದಗಿಸುವುದು) | ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 440 ಸರ್ಕಾರಿ ಪದವಿ ಕಾಲೇಜುಗಳು ಇರುತ್ತವೆ.<br><br>ಸದರಿ ಕಾಲೇಜುಗಳಿಗೆ ಮಂಜೂರಾಗಿರುವ, ಕರ್ತವ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ವಿಷಯವಾರು ಹುದ್ದೆಗಳ ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| (ಆ) | ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ವಿಷಯವಾರು ಹುದ್ದೆಗಳ ಸಂಖ್ಯೆ ಎಷ್ಟು? ಖಾಲಿ ಹುದ್ದೆಗಳನ್ನು ತುಂಬದಿರಲು ಕಾರಣವೇನು; (ವಿವರ ನೀಡುವುದು) | 2021ನೇ ಸಾಲಿನಲ್ಲಿ ಕೈಗೊಳ್ಳಲಾದ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಒಟ್ಟು 1206 ಅಭ್ಯರ್ಥಿಗಳ ಪೈಕಿ ಇಲ್ಲಿಯವರೆಗೆ 1132 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.<br><br>ಮುಂದುವರೆದು, 2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕ ವೃಂದದ ಒಟ್ಟು 2000 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆದೇಶಿಸಲಾಗಿದ್ದು, ಆ ಪೈಕಿ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 826 ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |
| (ಇ) | ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬೋಧಕ ಹುದ್ದೆಗಳು ಖಾಲಿ ಇರುವುದರಿಂದ ವರ್ಷದಿಂದ ವರ್ಷಕ್ಕೆ ಶಿಕ್ಷಣದ ಗುಣಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು;? (ವಿವರ ನೀಡುವುದು) | ಸರ್ಕಾರಿ ಪದವಿ ಕಾಲೇಜುಗಳಲ್ಲಿ ಲಭ್ಯವಾಗುವ ಕಾರ್ಯಭಾರವನ್ನು ಮೊದಲು ಖಾಯಂ ಉಪನ್ಯಾಸಕರಿಗೆ ಹಂಚಿಕೆ ಮಾಡಿ, ಪ್ರತಿ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಗನುಗುಣವಾಗಿ ಲಭ್ಯವಾಗುವ ಹೆಚ್ಚುವರಿ ಕಾರ್ಯಭಾರಕ್ಕೆ ಅನುಗುಣವಾಗಿ ಯು.ಜಿ.ಸಿ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿದ ಅರ್ಹ ಅತಿಥಿ ಉಪನ್ಯಾಸಕರ ಸೇವೆಯನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳಲಾಗುತ್ತಿದ್ದು, ಆ ಮೂಲಕ ಶಿಕ್ಷಣದ ಗುಣಮಟ್ಟ ಕುಸಿಯದಂತೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ. |

<table>
<tr>
<td>(ಈ)</td>
<td>ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಷ್ಟು ಬೋಧಕ ಸಿಬ್ಬಂದಿಗಳು ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ; (ಕಾಲೇಜುವಾರು/ಸಿಬ್ಬಂದಿವಾರು ವಿವರ ಒದಗಿಸುವುದು)</td>
<td rowspan="2">ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬೋಧಕ ಸಿಬ್ಬಂದಿಗಳು ಬೇರೆ ಇಲಾಖೆಗಳಲ್ಲಿ ನಿಯೋಜನೆ ಮಾಡಲಾಗಿರುವುದಿಲ್ಲ. ಆದಾಗ್ಯೂ, ಸಂಬಂಧಪಟ್ಟ ನಿಗಮ/ಮಂಡಳಿ ಅಧ್ಯಕ್ಷರುಗಳ ಕೋರಿಕೆಯ ಮೇರೆಗೆ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಈ ಕೆಳಕಂಡ ಇಬ್ಬರು ಬೋಧಕರನ್ನು ನಿಯೋಜಿಸಲಾಗಿದ್ದು, ಸದರಿ ಬೋಧಕರುಗಳಿಗೆ ಯು.ಜಿ.ಸಿ ವೇತನದ ಬದಲಾಗಿ ರಾಜ್ಯ ವೇತನ ಶ್ರೇಣಿಯಲ್ಲಿ ವೇತನವನ್ನು ನೀಡಲಾಗುತ್ತಿದೆ.
<table>
<tr><th>ಕ್ರ. ಸಂ</th><th>ಹೆಸರು, ವಿಷಯ</th><th>ಮಾತೃ ಕಾಲೇಜು</th><th>ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ/ಕಛೇರಿ</th></tr>
<tr><td>1</td><td>ಭಾನುಪ್ರಕಾಶ್ .ಕೆ ನಿರ್ವಹಣಾ ಶಾಸ್ತ್ರ, ಸಹಾಯಕ ಪ್ರಾಧ್ಯಾಪಕರು</td><td>ಸರ್ಕಾರಿ ಮಹಿಳಾ ಕಾಲೇಜು, ಕೆ.ಆರ್ ಸಾಗರ</td><td>ಮಾನ್ಯ ಶಾಸಕರು, ಕೆ.ಜಿ.ಎಫ್ ವಿಧಾನ ಸಭಾ ಕ್ಷೇತ್ರ ಇವರ ಆಪ್ತ ಸಹಾಯಕರು</td></tr>
<tr><td>2</td><td>ಜಯರಾಮ ಅರ್ಥಶಾಸ್ತ್ರ, ಸಹಾಯಕ ಪ್ರಾಧ್ಯಾಪಕರು</td><td>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಕಟನೂರು</td><td>ಮಾನ್ಯ ಪಶು ಸಂಗೋಪನೆ ರೇಷ್ಮೆ ಸಚಿವರು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರ ವಿಶೇಷಾಧಿಕಾರಿ</td></tr>
</table>
</td>
</tr>
<tr>
<td>(ಉ)</td>
<td>ಕಾಲೇಜುಗಳಲ್ಲಿ ಸಂಬಳ ಪಡೆದು ಅನ್ಯ ಕರ್ತವ್ಯದ ಮೇರೆಗೆ ಎಷ್ಟು ಭೋದಕ ಸಿಬ್ಬಂದಿಗಳು ಬೇರೆ ಬೇರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ; (ವಿವರ ಒದಗಿಸುವುದು)</td>
</tr>
<tr>
<td>(ಊ)</td>
<td>ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಗಳ ಕೊರತೆಯಿಂದಾಗಿ ಶಿಕ್ಷಣ ಗುಣಮಟ್ಟ ಕುಸಿಯುತ್ತಿರುವಾಗ ಬೋಧಕ ಸಿಬ್ಬಂದಿಗಳನ್ನು ನಿಯೋಜನೆ/ಅನ್ಯ ಕರ್ತವ್ಯದ ಮೇರೆಗೆ ಬೇರೆ ಬೇರೆ ಇಲಾಖೆಗಳಿಗೆ ನಿಯೋಜಿಸಿರುವ ಬಗ್ಗೆ ಸರ್ಕಾರದ ನಿಲುವೇನು;</td>
<td rowspan="2">ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಬೋಧಕರ ಕೊರತೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಉದ್ಭವವಾಗುವ ಹೆಚ್ಚುವರಿ ಕಾರ್ಯಭಾರಕ್ಕೆ ಅನುಗುಣವಾಗಿ ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿದ ಅರ್ಹ ಅತಿಥಿ ಉಪನ್ಯಾಸಕರ ಸೇವೆಯನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳಲಾಗುತ್ತಿದ್ದು, ಆ ಮೂಲಕ ಶಿಕ್ಷಣದ ಗುಣಮಟ್ಟ ಕುಸಿಯದಂತೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ.</td>
</tr>
<tr>
<td>(ಋ)</td>
<td>ನಿಯೋಜನೆ/ಅನ್ಯ ಕರ್ತವ್ಯದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಹಿಂದಕ್ಕೆ ಕರೆಸಿಕೊಂಡು ಕಾಲೇಜುಗಳಲ್ಲಿ ಬೋಧನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td>
</tr>
</table>

**ಸಂಖ್ಯೆ:ಇಡಿ 87 ಡಿಸಿಇ 2026(ಇ)**

**(ಡಾ. ಎಂ.ಸಿ ಸುಧಾಕರ್)**
ಉನ್ನತ ಶಿಕ್ಷಣ ಸಚಿವರು

**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ವಿಷಯವಾರು ಹುದ್ದೆಗಳ ವಿವರ (ದಿನಾಂಕ:31.01.2026ರಲ್ಲಿದ್ದಂತೆ)**

| ಕ್ರ.ಸಂ | ವಿಷಯ | ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ | ಹಾಲಿ ಕರ್ತವ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸಂಖ್ಯೆ | ಒಟ್ಟು ಖಾಲಿ ಹುದ್ದೆಗಳು |
|---|---|---|---|---|
| 1 | 2 | 3 | 4 | 5 |
| 1 | ಕನ್ನಡ | 841 | 740 | 101 |
| 2 | ಇಂಗ್ಲೀಷ್ | 656 | 569 | 87 |
| 3 | ಹಿಂದಿ | 69 | 43 | 26 |
| 4 | ಸಂಸ್ಕೃತ | 7 | 1 | 6 |
| 5 | ತೆಲುಗು | 2 | 0 | 2 |
| 6 | ಉರ್ದು | 38 | 14 | 24 |
| 7 | ಅರೇಬಿಕ್ | 1 | 0 | 1 |
| 8 | ಸಂಗೀತ | 2 | 0 | 2 |
| 9 | ಇತಿಹಾಸ | 592 | 490 | 102 |
| 10 | ಅರ್ಥಶಾಸ್ತ್ರ | 646 | 535 | 111 |
| 11 | ರಾಜ್ಯಶಾಸ್ತ್ರ | 545 | 450 | 95 |
| 12 | ಸಮಾಜಶಾಸ್ತ್ರ | 377 | 332 | 45 |
| 13 | ಶಿಕ್ಷಣ | 4 | 3 | 1 |
| 14 | ಭೂಗೋಳಶಾಸ್ತ್ರ | 59 | 50 | 9 |
| 15 | ತತ್ವಶಾಸ್ತ್ರ | 2 | 1 | 1 |
| 16 | ಮನ:ಶಾಸ್ತ್ರ | 49 | 43 | 6 |
| 17 | ಅಪರಾಧ ಶಾಸ್ತ್ರ | 5 | 5 | 0 |
| 18 | ಫೋರೆನ್ಸಿಕ್ ಸೈನ್ಸ್ | 2 | 2 | 0 |
| 19 | ವಾಣಿಜ್ಯಶಾಸ್ತ್ರ | 1502 | 1310 | 192 |
| 20 | ಪತ್ರಿಕೋದ್ಯಮ | 16 | 13 | 3 |
| 21 | ಕಾನೂನು | 48 | 39 | 9 |
| 22 | ಮಾಸ್ಟರ್ ಆಫ್ ಇಂಟರ್‌ನ್ಯಾಷನಲ್ ಬಿಸಿನೆಸ್ | 5 | 1 | 4 |
| 23 | ಸೋಶಿಯಲ್ ವರ್ಕ್ (ಎಂಎಸ್‌ಡಬ್ಲ್ಯೂ/ಬಿಎಸ್‌ಡಬ್ಲ್ಯೂ) | 64 | 63 | 1 |
| 24 | ಬಿಸಿನೆಸ್ ಅಡ್ಮಿನಿಸ್ಟ್ರೇಷನ್ (ಬಿಬಿಎ/ಬಿಬಿಎಂ/ಎಂಬಿಎ) | 166 | 138 | 28 |
| 25 | ಟೂರಿಸಂ ಅಡ್ಮಿಸ್ಟ್ರೇಷನ್ | 3 | 3 | 0 |
| 26 | ಬಿಎಫ್‌ಟಿ | 3 | 2 | 1 |
| 27 | ಭೌತಶಾಸ್ತ್ರ | 373 | 332 | 41 |
| 28 | ಎಲೆಕ್ಟ್ರಾನಿಕ್ಸ್ | 26 | 22 | 4 |
| 29 | ರಸಾಯನಶಾಸ್ತ್ರ | 205 | 168 | 37 |
| 30 | ಬಯೋಕೆಮಿಸ್ಟ್ರಿ | 17 | 16 | 1 |

| ಕ್ರ.ಸಂ | ವಿಷಯ | ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ | ಹಾಲಿ ಕರ್ತವ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸಂಖ್ಯೆ | ಒಟ್ಟು ಖಾಲಿ ಹುದ್ದೆಗಳು |
|---|---|---|---|---|
| 31 | ಕೈಗಾರಿಕಾ ರಸಾಯನಶಾಸ್ತ್ರ | 6 | 3 | 3 |
| 32 | ಸಸ್ಯಶಾಸ್ತ್ರ | 95 | 82 | 13 |
| 33 | ಮೈಕ್ರೋಬಯಾಲಜಿ | 14 | 14 | 0 |
| 34 | ಪ್ರಾಣಿಶಾಸ್ತ್ರ | 82 | 77 | 5 |
| 35 | ಬಯೋಟೆಕ್ನಾಲಜಿ | 14 | 14 | 0 |
| 36 | ಗಣಿತಶಾಸ್ತ್ರ | 328 | 304 | 24 |
| 37 | ಸಂಖ್ಯಾಶಾಸ್ತ್ರ | 7 | 6 | 1 |
| 38 | ಗಣಕವಿಜ್ಞಾನ | 283 | 241 | 42 |
| 39 | ಭೂಗರ್ಭಶಾಸ್ತ್ರ | 5 | 4 | 1 |
| 40 | ಗೃಹವಿಜ್ಞಾನ | 19 | 17 | 2 |
| 41 | ರೇಷ್ಮೆಕೃಷಿ | 3 | 2 | 1 |
| 42 | ಪರಿಸರ ವಿಜ್ಞಾನ | 5 | 3 | 2 |
| 43 | ಮಹಿಳಾ ಅಧ್ಯಯನ | 1 | 0 | 1 |
| | ಒಟ್ಟು | **7187** | **6152** | **1035** |

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು